ನಮ್ಮ ಅಸ್ತಿತ್ವವನ್ನೇ ಮೂಲವಾಗಿಟ್ಟುಕೊಂಡು ಸ್ವಾಮೀಜಿ ಸರಳ ಸೂತ್ರವೊಂದನ್ನು ಕೊಟ್ಟಿದ್ದಾರೆ. 'ತ್ಯಾಗ' ಮತ್ತು 'ಸೇವೆ' ಎಂಬ ಮೌಲ್ಯಗಳೊಂದಿಗೆ 'ರಾಷ್ಟ್ರನಿರ್ಮಾಣ'ದ ಕೈಂಕರ್ಯವನ್ನು ಜೀವನದ ಧ್ಯೇಯವನ್ನಾಗಿ ಮಾಡಿಕೊಳ್ಳಲು ಯುವಜನತೆಗೆ ಕರೆಕೊಟ್ಟಿದ್ದಾರೆ. ಸ್ವಲ್ಪ ಹೆಚ್ಚು ತಿಳಿದವರಿಗೆ, ಈ ಜೀವನಕ್ರಮವನ್ನು 'ಆಧ್ಯಾತ್ಮಿಕ ಅನ್ವೇಷಣೆ'ಯನ್ನಾಗಿ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ. ಮಾನವ ಜೀವನ ಸಾಧನೆಯ ಕ್ಷಣಭಂಗುರತೆ ಹಾಗೂ ಐಹಿಕ ಸಂಪತ್ತಿನ ನಶ್ವರತೆ – ಇವೆರಡನ್ನೂ ಪರಿಗಣಿಸಿ ಈ ಪರಿಕಲ್ಪನೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಈ ಮೂಲಕ ನಾವು ಜೀವಿಸುವುದಕ್ಕೆ ಉನ್ನತ ಕಾರಣವನ್ನು ತೋರಿಸಲು ಪ್ರಯತ್ನಿಸಿದ್ದಾರೆ. ನಾವು 'ಅನುಭವಿಸುವ ಸಾಮರ್ಥ್ಯ'ವನ್ನು ಬೆಳೆಸಿಕೊಳ್ಳಬೇಕೆಂದು ಸ್ವಾಮೀಜಿ ಹೇಳುತ್ತಾರೆ. ತನ್ಮೂಲಕ ಬಡವರ, ನಿರ್ಗತಿಕರ ಕಷ್ಟ – ಕಾರ್ಪಣ್ಯಗಳು ನಮಗೆ ಅರ್ಥವಾಗಿ, ನಮ್ಮ ನಿದ್ದೆ ಮಾಯವಾಗಿ, ನಮ್ಮ ಹೃದಯಗಳು ಅವರಿಗಾಗಿ ಮಿಡಿಯುವಂತಾಗಬೇಕು ಎನ್ನುತ್ತಾರೆ ಸ್ವಾಮೀಜಿ. ಹಾಗೆ ಆದಾಗ, ವಿಶೇಷ ಶಕ್ತಿಯೊಂದು ನಮ್ಮನ್ನಾವರಿಸಿ, ನಮ್ಮ ಸ್ವಂತ ಕಷ್ಟಗಳನ್ನು ಮರೆಸಿ, ನಮ್ಮನ್ನು ಸಾಮಾಜಿಕ ಪರಿವರ್ತಕರನ್ನಾಗಿಸುತ್ತದೆ ಎಂದವರು ಅಭಿಪ್ರಾಯ ಪಡುತ್ತಾರೆ. ಅನುಭವಿಸಿ ಅರ್ಥಮಾಡಿಕೊಂಡ ನಂತರ ಕಾರ್ಯೋನ್ಮುಖರಾಗುವವರೆಗೆ, ಈ ಬಲವತ್ತಾದ ಮಂತ್ರವನ್ನು ಬೋಧಿಸುತ್ತಾರೆ. ಅದೇ Purity (ಪರಿಶುದ್ಧತೆ), Patience (ತಾಳ್ಮೆ) ಮತ್ತು Perseverance (ಪರಿಶ್ರಮ) – '3P' ಸಮಾಜಮುಖಿ ಕೆಲಸ ಮಾಡುವವರೆಲ್ಲರೂ ಈ ಮೂರು ಗುಣಗಳನ್ನು ಹೊಂದಿರಲೇಬೇಕು ಎಂಬುದು ನನ್ನ ಅಭಿಪ್ರಾಯ. ವಿಚಾರ, ಮಾತು ಹಾಗೂ ಕೆಲಸದಲ್ಲಿ ಪರಿಶುದ್ಧತೆ; ಸಮುದಾಯ ಅಭಿವೃದ್ಧಿ ಕಾರ್ಯದ ಒಳತಿರುಳನ್ನು ಅರ್ಥ ಮಾಡಿಕೊಳ್ಳಲು ಹಾಗೂ ನಮ್ಮ ಸಂಕೀರ್ಣ ವ್ಯವಸ್ಥೆಯಲ್ಲಿ ಕೆಲಸಮಾಡಲು ತಾಳ್ಮೆ, ಜಾಣ್ಮೆ ಹಾಗೂ ಪರಿಶ್ರಮ. ಇವಿಲ್ಲದಿದ್ದರೆ ಆಯಾಸವು ಆವರಿಸಿ, ಉತ್ಸಾಹ / ಪ್ರೇರಣೆ ಎಲ್ಲಾ ಮಾಯವಾಗಿ ನಕಾರಾತ್ಮಕ ಚಿಂತನೆಗಳು ಮನೆಮಾಡಿ, ನಮ್ಮನ್ನು ನಿಷ್ಕ್ರಿಯವಾಗಿಸುತ್ತವೆ.

ವಿವೇಕಾನಂದರು ಮನುಷ್ಯನ ಮನಸ್ಸನ್ನು ಹಾಗೂ ಸಮಾಜವನ್ನು ತೀಕ್ಷ್ಣವಾಗಿ ವೀಕ್ಷಿಸುತ್ತಿದ್ದರಲ್ಲದೆ ಆಳವಾಗಿ ಅಭ್ಯಸಿಸಿದ್ದರು. ಸಮಾಜದಲ್ಲಿ ಪರಿವರ್ತನೆ ತರಲು ಅಗಾಧವಾದ ಇಚ್ಛಾಶಕ್ತಿ ಹಾಗೂ ಪರಿಶ್ರಮದ ಆವಶ್ಯಕತೆ ಇದೆ ಎಂದು ಬಲ್ಲವರಾಗಿದ್ದರು. ಆದ್ದರಿಂದ ಯುವಜನತೆಗೆ ತಮ್ಮ ದೈಹಿಕ ಹಾಗೂ ಮಾನಸಿಕ ಶಕ್ತಿ–ಸ್ಥೈರ್ಯವನ್ನು ಹೆಚ್ಚಿಸಿಕೊಳ್ಳಲು ಅವರು ಕರೆಕೊಟ್ಟರು. ಯುವಕರು 'ಕಬ್ಬಿಣದ ಮಾಂಸಖಂಡಗಳು' ಹಾಗೂ 'ಉಕ್ಕಿನ ನರಗಳು' – ಇವನ್ನು ಹೊಂದಿರುವ ಪುರುಷಸಿಂಹರಾಗಬೇಕು ಎಂದು ಹೇಳುತ್ತಿದ್ದರು. ಯುವಕರು ಸಾಗರವನ್ನೇ ಆಪೋಶನ ತೆಗೆದುಕೊಳ್ಳಬಲ್ಲಂಥ ಅದಮ್ಯ ಇಚ್ಛಾಶಕ್ತಿಯನ್ನು ಹೊಂದಿರಬೇಕು ಎಂದು ನಂಬಿದ್ದರು. ಇದಲ್ಲದೆ ಸಮಾಜೋದ್ಧಾರ ಕಾರ್ಯಗಳಲ್ಲಿ ಉಂಟಾಗಬಹುದಾದ ತೊಡಕುಗಳನ್ನು ಅರಿಯಬಲ್ಲ ಹಾಗೂ ಯುವಕರನ್ನು ಎಚ್ಚರಿಸಬಲ್ಲ ಜಾಣ್ಮೆ ಅವರಲ್ಲಿತ್ತು. ಸ್ವಾಮೀಜಿ ಹೇಳುವ ಪ್ರಕಾರ, ಎಲ್ಲಾ ಒಳ್ಳೆಯ ಕೆಲಸಗಳು ಮೂರು ಹಂತಗಳನ್ನು ದಾಟಬೇಕು. ಅವೆಂದರೆ ಅಪಹಾಸ್ಯ, ಪ್ರತಿರೋಧ ಹಾಗೂ ಕಡೆಗೆ ಸ್ವೀಕಾರ. ನಮ್ಮ ಯುವಜನತೆಗೆ ಈ ಮೂರೂ ಹಂತಗಳನ್ನು ದಾಟುವ ತಾಳ್ಮೆ, ಪರಿಶ್ರಮ ಹಾಗೂ ಪರಿಶುದ್ಧತೆ ಇರಬೇಕು. ಸಮಾಜ ಹಲವು ಸಲ ಮಂದಗತಿ ಹಾಗೂ ವಿಶ್ವಾಸ ಘಾತುಕತನವನ್ನು ಪ್ರದರ್ಶಿಸುತ್ತದೆ. ಆದರೆ ತನ್ನ ಒಳಿತಿಗಾಗಿಯೇ ಕೆಲಸ ನಡೆಯುತ್ತಿದೆ ಎಂಬ ಅರಿವು ಮೂಡಿದಾಗ ಸ್ವೀಕೃತಿ ಸಹಜವಾಗಿ ಬರುತ್ತದೆ. ಇವತ್ತಿನ ಯುವಜನತೆ ಅತ್ಯಂತ ಫಲಿತಾಂಶ ಆಧಾರಿತರಾಗಿದ್ದು, ತಾವು ಮಾಡುವ ಪ್ರತಿಯೊಂದು ಕೆಲಸದ ಕಾರಣ ಹಿನ್ನೆಲೆ ಉಪಯೋಗಗಳನ್ನು ತಿಳಿಯಬಯಸುತ್ತಾರೆ. ಅಂಥವರಿಗೆ ಸ್ವಾಮೀಜಿಯ ಬಳಿ ಸರಳ ಸೂತ್ರವೊಂದಿತ್ತು. ಯಾರೇ ಆಗಲಿ ಮಾಡಬಹುದಾದ ಮೂರು ಹಂತದ ಸೇವೆಗಳನ್ನು ಅವರು ಸರಳವಾಗಿ ವಿವರಿಸಿದ್ದಾರೆ. ಮೊದಲನೆಯದು **ದೈಹಿಕ ಸೇವೆ** – ಮನುಷ್ಯನ ದೇಹದ ಬಗ್ಗೆ ಕಾಳಜಿ ವಹಿಸಿ, ದೈಹಿಕ ನೋವು ಬಳಲಾಟಗಳನ್ನು ನಿವಾರಿಸುವಂತಹ ಕೆಲಸಗಳನ್ನು ಮಾಡುವುದು. ಆಸ್ಪತ್ರೆ, ಅನಾಥಾಲಯ, ವೃದ್ಧಾಶ್ರಮ, ಆದಾಯಗಳಿಕೆ ಕಾರ್ಯಕ್ರಮಗಳನ್ನು ನಡೆಸುವುದು – ಇವೆಲ್ಲ ಈ ಶ್ರೇಣಿಗೆ ಸೇರುತ್ತವೆ. ಮುಂದಿನ ಹಂತ **ಬೌದ್ಧಿಕ ಸೇವೆ.** ಶಾಲಾ – ಕಾಲೇಜುಗಳನ್ನು ನಡೆಸುವುದು, ಜಾಗೃತಿ ಸಬಲೀಕರಣ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು ಇತ್ಯಾದಿ ಇದರ ಅಡಿ ಬರುತ್ತವೆ. ಮುಂದಿನ ಉನ್ನತ ಹಂತ **ಆಧ್ಯಾತ್ಮಿಕ ಸೇವೆ.**

ಸೇವಾಕಾರ್ಯಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಎದುರಾಗಬಹುದಾದ ಅಡೆತಡೆಗಳ ಬಗ್ಗೆ ಎಚ್ಚರಿಕೆ ನೀಡುವುದನ್ನು ವಿವೇಕಾನಂದರು ಮರೆಯಲಿಲ್ಲ. ಮನುಷ್ಯನ 'ಅಹಂ' ಮತ್ತು ಸಮಸ್ಯೆಗಳನ್ನು ತಂದೊಡ್ಡಬಲ್ಲ ಅದರ ವಿಶೇಷ ಸಾಮರ್ಥ್ಯವನ್ನು ಅವರು ಚೆನ್ನಾಗಿ ಗ್ರಹಿಸಿದ್ದರು. ನಾವು ಇರುವುದಕ್ಕಿಂತ ಹೆಚ್ಚಿನ ಸ್ಥಾನವನ್ನು ನಮಗೆ ನಾವೇ ಕೊಟ್ಟುಕೊಳ್ಳುವುದರ ಅಪಾಯದ ಬಗ್ಗೆ ಅವರು ಎಚ್ಚರಿಸುತ್ತಾರೆ. ಪೀಠದ ಮೇಲೆ ನಿಂತು ಬಡವರತ್ತ ಪುಡಿಗಾಸು ಬಿಸಾಡಬಾರದೆಂಬ ಅವರ ಉಕ್ತಿ ಜನಜನಿತವಾದದ್ದು. ಯುವಕರು ಇಂಥ ಕೆಲಸಗಳನ್ನು ಸಮಾಜದ ಉದ್ಧಾರಕ್ಕೆ ಮಾತ್ರವಲ್ಲದೆ, ತಮ್ಮ ಸ್ವಂತ ವ್ಯಕ್ತಿತ್ವದ ವಿಕಸನ ಹಾಗೂ ಅಭ್ಯುದಯಕ್ಕಾಗಿಯೂ ಕೈಗೊಳ್ಳಬೇಕೆಂದು ಸ್ವಾಮೀಜಿ ಪ್ರತಿಪಾದಿಸಿದ್ದರು. ಆಧ್ಯಾತ್ಮಿಕ ಬೆಳವಣಿಗೆಯ ಅಂತಿಮ ಹಂತ ತಲುಪಲು ಸಮಾಜಸೇವೆ ಒಂದು ಮಾರ್ಗ ಎಂದು ಅವರು ಕಂಡುಕೊಂಡಿದ್ದರು. ಮನುಷ್ಯನಲ್ಲಿರುವ ಭಗವಂತನನ್ನು 'ಸೇವೆ ಮಾಡಿ' ಎಂಬ ಸಲಹೆಯಿತ್ತರು. ಸರಳ ಸುಂದರವಾದ ಈ ಒಂದೇ ವಾಕ್ಯದಲ್ಲಿ ತಮ್ಮ ಎಲ್ಲಾ ತತ್ತ್ವವನ್ನು ಪ್ರತಿಪಾದಿಸಿದರು. ಅವರ ಈ ಆದರ್ಶ ಪ್ರತಿಯೊಬ್ಬರ ಕೈಗೆಟುಕುವಂಥದ್ದು, ಅಷ್ಟೇ ಅಲ್ಲದೆ, ಭಾವನಾತ್ಮಕವಾಗಿ ಸೆಳೆಯುವಂಥದ್ದು ಮತ್ತು ಸೇವಾಕಾರ್ಯದಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುವಂಥದ್ದು ಕೂಡ ಆಗಿದೆ.

ನಮ್ಮ ದೇಶದ ಸಮಸ್ಯೆಗಳನ್ನು ನಿವಾರಿಸಲು ಅತ್ಯಂತ ಸರಳ ಮಾರ್ಗವೆಂದರೆ ವಿವೇಕಾನಂದರ ಜೀವನ ಹಾಗೂ ಸಂದೇಶವನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಅದನ್ನು ಯುವಜನತೆಗೆ ತಿಳಿಹೇಳುವುದು ಎಂದು ನನ್ನ ಅನಿಸಿಕೆ. ಪ್ರತಿ ವ್ಯಕ್ತಿಯೂ ಪರಿವರ್ತನೆ ತರುವುದನ್ನು ತನ್ನಿಂದಲೇ ಪ್ರಾರಂಭಿಸಬಹುದು. ತನ್ನ ವ್ಯಕ್ತಿತ್ವ–ಚಿಂತನೆ–ಸಾಮರ್ಥ್ಯಗಳನ್ನು ತಿದ್ದಿ ಬಲಪಡಿಸಿಕೊಂಡರೆ,

ಮುಂದಿನ ಕೆಲಸ ಸರಳವಾದೀತು. ಎಲ್ಲ ಲೌಕಿಕ ಜವಾಬ್ದಾರಿಗಳನ್ನು ತೊರೆದು ಸರಳ ಉಡುಗೆ ತೊಟ್ಟು, ಯಾವುದೋ ಕುಗ್ರಾಮದಲ್ಲಿ ಹಸಿದು ಕೂರುವುದು ಸಮಾಜಸೇವೆಯಲ್ಲ ಎಂದು ಎಲ್ಲರೂ ಮನಗಾಣಬೇಕು. ಅದು ವ್ಯಕ್ತಿಯ ಸಾಮಾಜಿಕ ಅಂತಃಕರಣದ ಜಾಗೃತಿಯಿಂದ ಆರಂಭಗೊಂಡು, ಅಂತಿಮವಾಗಿ ಸಾಮಾಜಿಕ ಕ್ರಿಯೆಯಾಗಿ ಪರಿವರ್ತನೆಯಾಗಬೇಕು. ಅದಕ್ಕೂ ಮುನ್ನ ಆ ವ್ಯಕ್ತಿಯು ತನ್ನ ಅಗತ್ಯಗಳು ಹಾಗೂ ಇತಿಮಿತಿಗಳನ್ನು ಅರಿತು ಕೊಳ್ಳಬೇಕು. ಮೊದಲು ತನ್ನಿಂದ ಪ್ರಾರಂಭಿಸಿ, ನಂತರ ಇತರರನ್ನು ಮುಟ್ಟುವಂತೆ, ತನ್ನ ಚಟುವಟಿಕೆಗಳ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಹೋಗಬೇಕು. ನಾವು ಮಾಡುವ ವೃತ್ತಿಯನ್ನೇ ಅಚ್ಚುಕಟ್ಟಾಗಿ, ಶ್ರದ್ಧೆಯಿಂದ ಮಾಡಬೇಕು. ನಮ್ಮದೇ ಆದ ಪುಟ್ಟ ವೃತ್ತದಲ್ಲಿ ಏನನ್ನಾದರೂ ಮಾಡುವ ಅವಕಾಶ ಇದ್ದೇ ಇರುತ್ತದೆ. ಈ ಸಣ್ಣ ಬದಲಾವಣೆ ಮುಂದಿನ ದೊಡ್ಡ ಪರಿವರ್ತನೆಗೆ ಬುನಾದಿ ಯಾಗಬೇಕು. ಸಂಸಾರದ ಜಂಜಾಟ–ಒತ್ತಡ ಇಲ್ಲದವರು (ಅಥವಾ ಕಡಿಮೆ ಇರುವವರು) ಸಮಾಜಸೇವೆಯನ್ನು ತಮ್ಮ ಪೂರ್ಣಾವಧಿಯ ಕೆಲಸವನ್ನಾಗಿ ತೆಗೆದುಕೊಳ್ಳಬಹುದು. ಇದು ಸಾಧ್ಯವಾಗದಿದ್ದಲ್ಲಿ ಜನ ತಮ್ಮ ತಮ್ಮ ವೃತ್ತಿಯಲ್ಲೇ ಮುಂದುವರೆದು, ಅಲ್ಲೇ ಸಕಾರಾತ್ಮಕ ಬದಲಾವಣೆ / ಪರಿವರ್ತನೆ ತರಲು ಶ್ರಮಿಸ ಬೇಕು.

ವೃತ್ತಿ ಹಾಗೂ ಬದುಕಿನ ಮಧ್ಯೆ ಸಮತೋಲನ ಕಾಯ್ದು ಕೊಳ್ಳುವುದನ್ನು ನಮ್ಮ ಕೆಲಸಕ್ಕಷ್ಟೇ ಸೀಮಿತವಾಗಿರಿಸದೆ, ಸಾಮಾಜಿಕ ಬದುಕಿಗೂ ವಿಸ್ತರಿಸಬಹುದು. ಹೀಗೆ ಮಾಡುವುದರಿಂದ ಅಸಂಖ್ಯಾತ ಯುವಕ ಯುವತಿಯರನ್ನು ಉನ್ನತವಾದ ಹಾಗೂ ಘನವಾದ ಕೆಲಸಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬಹುದು. ಮೇಲಾಗಿ ಸಮಾಜಸೇವೆ ಮಾಡುವುದರಿಂದ ಲೋಕದ ಸಮಸ್ಯೆ ಗಳಿಗೆ ಪರಿಹಾರ ಸಿಗುವುದರ ಜೊತೆಗೆ, ತಮ್ಮ ಆಂತರಿಕ ದ್ವಂದ್ವ, ತೊಳಲಾಟಗಳಿಗೂ ಉತ್ತರ ದೊರಕುವುದು ಸಾಧ್ಯ ಎಂದು ಯುವ ಜನತೆ ಅರ್ಥಮಾಡಿಕೊಳ್ಳಬೇಕು. ವಿವೇಕಾನಂದರ ಆಶಯವೂ ಕೂಡ ಇದೇ ಆಗಿತ್ತು.

(ಮೂಲ ಲೇಖನ ಇಂಗ್ಲಿಷ್‌ನಲ್ಲಿದೆ.
**ಕನ್ನಡಕ್ಕೆ ಅನುವಾದ:** *ಡಾ. ಅನಿಲ್ ಸಿ.*)

## ವಿವೇಕಾನಂದ ಸ್ಮರಣೆ

ಶ್ರೀರಾಮಕೃಷ್ಣರು ಗಂಟಲುಬೇನೆಯಿಂದ ನರಳುತ್ತಿದ್ದ ಕಾಲ. ಆ ದಿನಗಳಲ್ಲಿ ನಡೆದ ಒಂದು ಘಟನೆಯನ್ನು ಸ್ವಾಮಿ ವಿಮಲಾನಂದರು ಹೀಗೆ ಸ್ಮರಿಸಿಕೊಳ್ಳುತ್ತಾರೆ: "ಶ್ರೀರಾಮಕೃಷ್ಣರು ತಮ್ಮ ಅಂತಿಮ ದಿನಗಳಲ್ಲಿ ಗಂಟಲು ಬೇನೆಯಿಂದ ನರಳುತ್ತಿದ್ದಾಗ ವೈದ್ಯ ಮಹೇಂದ್ರಲಾಲ ಸರ್ಕಾರನು ಈ ವ್ಯಾಧಿ 'ಗಂಟಲ ಕ್ಯಾನ್ಸರ್' ಎಂದು ನಿರ್ಧರಿಸಿದನು. ಶ್ರೀರಾಮಕೃಷ್ಣರ ಶಿಷ್ಯರಿಗೆ, ಇದೊಂದು ಅಂಟುಜಾಡ್ಯವೆಂದೂ, ಎಚ್ಚರಿಕೆಯಿಂದ ಶುಶ್ರೂಷೆ ಮಾಡಬೇಕೆಂದೂ ಎಚ್ಚರಿಕೆ ನೀಡಿದ್ದನು. ಇದರಿಂದಾಗಿ ಕೆಲವು ಯುವಶಿಷ್ಯರ ಮನಸ್ಸಿನಲ್ಲಿ ಭಯ ಮನೆಮಾಡಿತ್ತು. ನರೇಂದ್ರ ಇದನ್ನು ಗಮನಿಸಿದನು. ನೇರವಾಗಿ ಶ್ರೀರಾಮಕೃಷ್ಣರು ಇದ್ದ ಕೊಠಡಿಯೊಳಗೆ ಹೋದನು. ಅವರ ಬಳಿ ಒಂದು ಪಾತ್ರೆ ಇಟ್ಟಿದ್ದರು. ಕೀವು, ಸಿಂಬಳಗಳಿಂದ ಕೂಡಿದ ಅದನ್ನು ತೆಗೆದುಕೊಂಡು, ಎಲ್ಲ ಶಿಷ್ಯರೆದುರು ಗಟಗಟನೆ ಕುಡಿದುಬಿಟ್ಟನು. ಆ ದಿನದಿಂದ ಅಂಟುಜಾಡ್ಯದ ಭೀತಿ ಶಿಷ್ಯರ ಮನಸ್ಸನ್ನು ಎಂದಿಗೂ ಬಾಧಿಸಲಿಲ್ಲ."

* * * * * *

ಸರಸ್ವತಿಯ ವರಪುತ್ರನಾದ ಕಾಳಿದಾಸನಿಗೂ ಸಮರ್ಪಕವಾದ ಪದಗಳನ್ನು ಬಳಸಿ, ಸ್ವಾಮಿ ವಿವೇಕಾನಂದರ ಚೆಲುವನ್ನು ವರ್ಣಿಸುವ ಸಾಮರ್ಥ್ಯವಿರಲು ಸಾಧ್ಯವಿರಲಿಲ್ಲ ಎಂದೇ ಹೇಳಬೇಕಾಗುತ್ತದೆ. ಅವರು ಒಬ್ಬ ಸಮರ್ಥನಾದ ಕಲಾವಿದನ ಸೃಷ್ಟಿಯೇ ಸರಿ. ವಿಶಾಲವಾದ, ಕಮಲದಂಥ ಅವರ ಕಣ್ಣುಗಳು ಎಲ್ಲ ಹೋಲಿಕೆಗಳನ್ನೂ ಮೀರುವಂತೆ ಇದ್ದವು. ಸ್ವಾಮೀಜಿಯ ಕಣ್ಣುಗಳನ್ನು ಕುರಿತು ಒಮ್ಮೆ ಸ್ವಾಮಿ ಶಾರದಾನಂದಜಿ ಹೀಗೆ ಹೇಳುತ್ತಾರೆ: "ಅವರ ಕಣ್ಣುಗಳನ್ನು ಹೇಗೆ ತಾನೆ ನಾನು ವರ್ಣಿಸಲಿ?" ಹೀಗೆ ಹೇಳಿ ಅವರು ಮೌನಿಯಾದರು! ಮತ್ತೊಮ್ಮೆ ಶಿಷ್ಯರೊಬ್ಬರು ಈ ಬಗ್ಗೆಯೇ ಹೀಗೆ ಹೇಳುತ್ತಾರೆ: "ಒಮ್ಮೆ ಸ್ವಾಮೀಜಿ ಬಲರಾಮ ಬೋಸರ ಮನೆಯಲ್ಲಿ ಮಲಗಿದ್ದರು. ಅವರು ಕಣ್ಣಿನ ರೆಪ್ಪೆಗಳನ್ನು ಪೂರ್ಣವಾಗಿ ಮುಚ್ಚಿರಲಿಲ್ಲ. ಅವು ಶಿವನ ಕಣ್ಣುಗಳಂತೆ ಅರ್ಧಮಾತ್ರ ಮುಚ್ಚಿದ್ದವು."

ಒಂದೆರಡು ಸಲ ಸ್ವಾಮೀಜಿಯವರನ್ನು ಬೇಲೂರು ಮಠದಲ್ಲಿ ನೋಡುವ ಸೌಭಾಗ್ಯ ದೊರೆತಿತ್ತು ಎಂದು ಸ್ವಾಮಿ ನಿರ್ಲೇಪಾನಂದರು ಬರೆಯುತ್ತಾರೆ. ಆ ಮೂಲಕ ಸ್ವಾಮೀಜಿಯವರ ಭವ್ಯ ವ್ಯಕ್ತಿತ್ವದೆಡೆಗೆ ನಮ್ಮ ಗಮನವನ್ನು ಸೆಳೆಯುತ್ತಾರೆ. ಸ್ವಾಮೀಜಿ ಗಂಭೀರವಾಗಿದ್ದಾಗ ಮಠದಲ್ಲಿ ಯಾರಿಗೂ ಅವರ ಹತ್ತಿರ ಹೋಗಲು ಕೂಡ ಧೈರ್ಯವಾಗುತ್ತಿರಲಿಲ್ಲವಂತೆ. ಸ್ವಾಮಿ ನಿರ್ಲೇಪಾನಂದರು ಹೀಗೆ ಹೇಳುತ್ತಾರೆ: "ಒಮ್ಮೆ ನಾವು ದೋಣಿಯಲ್ಲಿ ಬೇಲೂರು ಮಠಕ್ಕೆ ಹೋಗಿದ್ದೆವು. ಅಲ್ಲಿ ಸಾಧುವೊಬ್ಬರು ಸಂಗೀತ ಹಾಡುತ್ತಿದ್ದರು. ಸ್ವಾಮೀಜಿ ತಮ್ಮ ಕೊಠಡಿಯಿಂದ ಮೆಟ್ಟಿಲಿಳಿದು ಬರುತ್ತಿದ್ದಂತೆ, ಸಂಗೀತ ನಿಂತಿತು. ಮೆಟ್ಟಿಲಿಳಿದು ಬಂದ ಸ್ವಾಮೀಜಿ ಬಳಿಕ ಬೇಲೂರು ಮಠದ ಅಂಗಣದಲ್ಲಿದ್ದ ಮಾವಿನ ಮರದ ಕೆಳಗೆ ನಿಂತುಕೊಂಡು, ಸಮಾಧಿಸ್ಥರಾದರು. ಇದನ್ನು ಕಂಡು ಸ್ವಾಮಿ ಪ್ರೇಮಾನಂದಜಿ ಮತ್ತಿತರ ಸಹೋದರಶಿಷ್ಯರು ಚಿಂತೆಗೊಳಗಾದರು. ಆಗ ಸ್ವಾಮೀಜಿಯ ಕಣ್ಣುಗಳು ದಾಸವಾಳದ ಹೂವುಗಳಂತೆ ಕೆಂಪಾಗಿದ್ದವು. ಅವರು ಉನ್ಮತ್ತರಾದಂತೆ ಕಾಣುತ್ತಿದ್ದರು. ಕ್ರಮೇಣ ಅವರ ಮನಸ್ಥಿತಿ ಬದಲಾಯಿತು. ಅವರು ದೀರ್ಘಕಾಲ ಆ ಅಂಗಣದಲ್ಲಿ ನಡೆದಾಡುತ್ತಿದ್ದರು. ಕೆಲವು ಸಲ ಗಟ್ಟಿಯಾಗಿ ಏನನ್ನೋ ಹೇಳುತ್ತಿದ್ದರು. ನಾವು ದೂರದಲ್ಲಿ ನಿಂತು ಅವರನ್ನೇ ಗಮನಿಸುತ್ತಿದ್ದೆವು. ಶ್ರೀರಾಮಕೃಷ್ಣರ ಶಿಷ್ಯರಿಂದ ನಾವು ಕೇಳಿದ್ದು ಇದು: ಸ್ವಾಮೀಜಿ ಸಮಾಧಾನಚಿತ್ತದಲ್ಲಿದ್ದಾಗ ಆತ್ಮೀಯರಾಗಿ, ಸ್ನೇಹಪರರಾಗಿ ಇರುತ್ತಿದ್ದರು. ಪ್ರಾಣಿಗಳೂ ಕೂಡ ಅವರ ಹತ್ತಿರ ಬಂದು ಮುತ್ತಿಕೊಳ್ಳುತ್ತಿದ್ದವು. ಅವರದು ಅಯಸ್ಕಾಂತದಂತಹ ವ್ಯಕ್ತಿತ್ವ. ಅವರನ್ನು ಕುರಿತು, 'ಅವರು ನಕ್ಕಾಗ ಇತರರೂ ನಗುತ್ತಿದ್ದರು. ಅವರು ಅತ್ತಾಗ ಇತರರೂ ಅಳುತ್ತಿದ್ದರು' ಎಂದು ಧಾರಾಳವಾಗಿ ಹೇಳಬಹುದು. ಒಮ್ಮೆ ಸ್ವಾಮೀಜಿ ನನಗೆ ಹೀಗೆ ಉಪದೇಶ ನೀಡಿದರು: 'ಯಾರಿಂದಲೂ ಸೇವೆಯನ್ನು ಪಡೆಯಬೇಡ. ನಿನ್ನ ಕೆಲಸವನ್ನು ನೀನೇ ಮಾಡಿಕೋ. ಯಾವ ಕೆಲಸವೂ ಅಲ್ಪವಾದುದಲ್ಲ ಎಂಬುದನ್ನು ಚೆನ್ನಾಗಿ ತಿಳಿದುಕೋ.' " (ಸಂಗ್ರಹ : ಕುಮಾರಿ ಸ್ವರ್ಣಗೌರಿ, ಮೈಸೂರು)

# ಭಾರತದ ಸ್ವಾತಂತ್ರ್ಯ ಚಳವಳಿ ಮತ್ತು ಸ್ವಾಮಿ ವಿವೇಕಾನಂದ

**ಡಾ. ಬಿ. ವಿ. ವಸಂತಕುಮಾರ್**

ಭಾರತದ ಆತ್ಮ ಧರ್ಮ. ಇಲ್ಲಿನ ಪರಮ ಪುರುಷಾರ್ಥ ಮೋಕ್ಷ. ಮೋಕ್ಷ ಎಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಈ ದೇಶದ ಆಂತರಿಕ ಬಹಿರಂಗ – ಈ ಎರಡೂ ತೆರನ ಮೋಕ್ಷಕ್ಕೆ ಕಾರಣರಾದವರು ಸಂತ ಮಹಂತರು. ಆ ಮಹಾತ್ಮರ ಸಾಲಿನಲ್ಲಿ ಸ್ವಾಮಿ ವಿವೇಕಾನಂದರು ಅವಿಸ್ಮರಣೀಯರು.

ನಮ್ಮ ಈ ಪುಣ್ಯಭೂಮಿಯ ಮೇಲೆ ಕ್ರಿ.ಪೂ. ೩೨೬ ರಲ್ಲಿ ಅಲೆಗ್ಸಾಂಡರ್ ದಾಳಿ ಮಾಡಿ, ಸೋತು ಹಿಂದಿರುಗಿದ್ದನು. ಅಂದಿನಿಂದಲೂ ಒಂದಲ್ಲ ಒಂದು ದಾಳಿಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಪ್ರತಿಯೊಂದು ದಾಳಿಯ ಸಂದರ್ಭದಲ್ಲೂ ಈ ರಾಷ್ಟ್ರದ ಆತ್ಮಶಕ್ತಿ ಪುಟಿದೆದ್ದಿದೆ.

೧೬೦೦, ಡಿಸೆಂಬರ್ ೩೧ ರಂದು ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡಿದ ಸಮಯದಿಂದ, ೧೯೪೭, ಆಗಸ್ಟ್ ೧೫ ರವರೆಗೆ, ಭಾರತದಲ್ಲಿ ಬ್ರಿಟಿಷರ ಆಗಮನ, ಆಳ್ವಿಕೆ, ನಿರ್ಗಮನ ನಡೆದಿದೆ. ಪ್ಲಾಸಿ ಕದನದ ಬಳಿಕ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದ ಬ್ರಿಟಿಷ್ ವ್ಯಾಪಾರಿಗಳ ವಿರುದ್ಧ ನಡೆದ ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಿಂದ ಹಿಡಿದು ೧೯೪೨ ರ ಚಲೇಜಾವ್ ಚಳವಳಿಯ ತನಕ ಹಾಗೂ ಅಲ್ಲಿಂದ ೧೯೪೭ ರ ಸ್ವಾತಂತ್ರ್ಯದ ಕ್ಷಣದವರೆಗೆ ದೇಶಾದ್ಯಂತ ರೋಮಾಂಚನಕಾರಿಯಾದ ಭಾರತ ಸ್ವಾತಂತ್ರ್ಯ ಚಳವಳಿ ನಡೆದಿದೆ. ಈ ಚಳವಳಿಗೆ ಬೇಕಾಗಿದ್ದ 'ಶಕ್ತಿ' ಯನ್ನು ಅಖಂಡವಾಗಿ ತುಂಬಿದ ಧೀಮಂತ ಚೇತನ ಸ್ವಾಮಿ ವಿವೇಕಾನಂದರು.

೧೮೬೩ರ ಜನವರಿ ೧೨ರಂದು ಹುಟ್ಟಿ ೧೯೦೨ರವರೆಗೆ ಬದುಕಿ, ಭಾರತವೇ ಆಗಿ ಬೆಳೆದು, ಭಾರತವನ್ನು ಬದುಕಿಸಿದ ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರು. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದು ಸರಿಯಾಗಿ ಆರು ವರ್ಷಕ್ಕೆ ವಿವೇಕಾನಂದರ ಜನನವಾಗಿದೆ. ೧೯೦೨ರ ಅನಂತರವೂ ತಮ್ಮ ಸಂದೇಶದ ಮೂಲಕ ಲಕ್ಷಾಂತರ ದೇಶಪ್ರೇಮಿಗಳನ್ನು ನಿರ್ಮಿಸಿ ಭಾರತದ ಅಂತರಾತ್ಮವನ್ನು ಜಾಗೃತಗೊಳಿಸುವ ಮೂಲಕ, ಗುಲಾಮಳಾಗಿದ್ದ ಭಾರತಮಾತೆಯನ್ನು ಜಗನ್ಮಾತೆಯಾಗಿಸಿದ್ದಾರೆ. ೧೮೯೩ ರಂದೇ

**ಜಡವಾಗಿದ್ದ ಭಾರತ ಜನಮಾನಸಕ್ಕೆ ಸ್ವಾಮಿ ವಿವೇಕಾನಂದರು ಸ್ವಾಭಿಮಾನ ಮತ್ತು ಆತ್ಮವಿಶ್ವಾಸಗಳ ಅಮೃತಸಿಂಚನವನ್ನು ನೀಡಿದರು. ಇದೇ ಮುಂದೆ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಚೇತೋಹಾರಿಯಾದ ಪ್ರೇರಣಾಶಕ್ತಿಯಾಗಿ ಪರಿಣಮಿಸಿತು. ಈ ಅಂಶವನ್ನು ಅತ್ಯಂತ ಸಮರ್ಥವಾಗಿ, ಐತಿಹಾಸಿಕ ದೃಷ್ಟಿಯಿಂದ, ಭಾವಪೂರಿತ ಧೀರೋದಾತ್ತ ಭಾಷೆಯಲ್ಲಿ ಬಿಂಬಿಸಿರುವ ಲೇಖಕರು ಮೈಸೂರಿನ ಮಹಾರಾಣಿ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜಿನ ಕನ್ನಡ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿದ್ದಾರೆ.**



ವಿಶ್ವವೇದಿಕೆಯಲ್ಲಿ ಜಗದ್ಗುರು ಭಾರತಮಾತೆಯನ್ನು ಪ್ರತಿಷ್ಠಾಪಿಸಿದ ಸ್ವಾತಂತ್ರ್ಯ ಸಂನ್ಯಾಸಿ, ಸ್ವಾಮಿ ವಿವೇಕಾನಂದರು.

ರಾಮಕೃಷ್ಣ ಪರಮಹಂಸರ ಮಹಾಸಮಾಧಿಯ ಬಳಿಕ ವಿವೇಕಾನಂದರು ಪರಿವ್ರಾಜಕರಾಗಿ ದೇಶವನ್ನು ಸುತ್ತಿ ಹೆಜ್ಜೆ ಹೆಜ್ಜೆಗೂ ಅದನ್ನು ಅರ್ಥಮಾಡಿಕೊಂಡರು. ಭಾರತವನ್ನು ಕೇವಲ ಬ್ರಿಟಿಷರ ಕೈಯಿಂದ ರಾಜಕೀಯವಾಗಿ ಬಿಡಿಸಿದರೆ ಸಾಲದು, ಮೌಢ್ಯ, ದಾರಿದ್ರ್ಯ, ಆತ್ಮವಿಸ್ಮೃತಿ, ಪಾಶ್ಚಾತ್ಯ ಸಂಸ್ಕೃತಿಯಿಂದ ಕೂಡ ಭಾರತೀಯರನ್ನೂ ಭಾರತವನ್ನೂ ಬಿಡಿಸಬೇಕು. ಇಂತಹ 'ಆತ್ಮಜಾಗೃತಿ'ಯ ಮೂಲಕ ಪ್ರಚಂಡ ರಾಷ್ಟ್ರೀಯತೆಯೊಂದಿಗೆ, ಜಗನ್ಮಾತೆ ಭಾರತವನ್ನು ಪುನರ್ನಿರ್ಮಾಣ ಮಾಡಬೇಕು; ಇಂಥ ನವಚೈತನ್ಯ ತನಗೆ ತಾನೇ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿ ಕೊಳ್ಳುತ್ತದೆ. ಇದು ವಿವೇಕಾನಂದರ ನಿಲುವಾಗಿತ್ತು.

ಸ್ವಾಮಿ ವಿವೇಕಾನಂದರು ತಮ್ಮ 'ವರ್ತಮಾನ ಭಾರತ' ಎಂಬ ಲೇಖನದಲ್ಲಿ ಭಾರತದ ದಾಸ್ಯಕ್ಕೆ ಕಾರಣಗಳನ್ನು ಸ್ಪಷ್ಟವಾಗಿ ದಾಖಲಿಸುತ್ತಾರೆ: "ಕೆಲವು ವರ್ತಕರು ವ್ಯಾಪಾರ ಮಾಡಬೇಕೆಂದು ವಿದೇಶದಿಂದ ಹಲವು ಸಾಗರಗಳಾಚೆ ಇರುವ ದೇಶಕ್ಕೆ ಬಂದು, ತಮ್ಮ ಜಾಣತನ ಮತ್ತು ಹಣದ ಸಹಾಯದಿಂದ ಹಿಂದೂ ಮತ್ತು ಮಹಮದೀಯ ರಾಜರನ್ನು ತಮ್ಮ ಕಡೆಗೆ ಸೆಳೆದುಕೊಂಡು ಕ್ರಮೇಣ ಅವರನ್ನು ಮರುಳುಗೊಳಿಸಿ, ತಮ್ಮ ಕೈಗೊಂಬೆಗಳನ್ನಾಗಿ ಮಾಡಿಕೊಂಡರು! ಇಷ್ಟು ಮಾತ್ರವಲ್ಲ. ಆಳರಸರ ಸಹಾಯವನ್ನು ಪಡೆದುಕೊಂಡು, ಅವರ ಅಸ್ತ್ರ, ಶಸ್ತ್ರ, ಯುದ್ಧಶಕ್ತಿಯನ್ನು ತಮ್ಮ ಜನರ ಐಶ್ವರ್ಯ ಹೆಚ್ಚಿಸಿಕೊಳ್ಳುವುದಕ್ಕೆ ಉಪಯೋಗಿಸಿಕೊಂಡರು!"

ಈ ಪರಿಸ್ಥಿತಿಯು ಭಾರತೀಯರಿಗೆ ಅತ್ಯಂತ ಹೊಸದಾಗಿತ್ತು ಎಂದು ಸ್ವಾಮೀಜಿ ಗುರುತಿಸುತ್ತಾರೆ. ಇಂಥ ಸ್ಥಿತಿಯಲ್ಲಿ ದಾಸ್ಯ ಭಾರತದ ಪರಿವರ್ತನೆಗೆ ಸಿಂಹಘರ್ಜನೆಯ ವೀರಸಂದೇಶ ನೀಡುತ್ತಾರೆ:

"ಹೇ ಭಾರತೀಯರೇ! ಅನ್ಯಭಾವೋಚ್ಚಾರಣೆ, ಹೀನ ಅನುಕರಣೆ, ಅನ್ಯಾಶ್ರಯ, ದಾಸರಿಗೆ ತಕ್ಕ ದುರ್ಬಲತೆ, ತುಚ್ಛವಾದ ಅವಹೇಳನಾಸ್ಪದವಾದ ದೌರಾತ್ಮ್ಯ– ಈ ಪರಿಕರಣಗಳಿಂದ ಮಾತ್ರವೇ ಪ್ರಗತಿಯ ಧವಲಗಿರಿ ಶಿಖರವನ್ನು ಏರಬಲ್ಲಿರಾ? ನಿಮ್ಮ ಹೇಡಿತನದಿಂದ ಧೀರರು ಮತ್ತು ವೀರರಿಗೆ ಮಾತ್ರ ಅರ್ಹವಾದ ಸ್ವಾತಂತ್ರ್ಯವನ್ನು ಗಳಿಸಬಲ್ಲಿರಾ? ಆರ್ಯಮಾತೆಯ ಅಮೃತ ಪುತ್ರರಿರಾ, ಮರೆಯದಿರಿ, ನಿಮ್ಮ ಸ್ತ್ರೀಯರ ಆದರ್ಶ ಸೀತಾ, ಸಾವಿತ್ರಿ, ದಮಯಂತಿಯರು. ಮರೆಯದಿರಿ, ನೀವು ಪೂಜಿಸುವ ಜಗದೀಶ್ವರನು ತ್ಯಾಗಿಕುಲ ಚೂಡಾಮಣಿ, ಉಮಾವಲ್ಲಭ ಶಂಕರ. ಮರೆಯದಿರಿ, ನಿಮ್ಮ ವಿವಾಹ, ನಿಮ್ಮ ಐಶ್ವರ್ಯ, ನಿಮ್ಮ ಜೀವನ ಬರಿಯ ಇಂದ್ರಿಯಭೋಗಕ್ಕೆ ಅಲ್ಲ, ವ್ಯಕ್ತಿಗತ ಸುಖಕ್ಕೆ ಅಲ್ಲ.



ಮರೆಯದಿರಿ, ಜಗನ್ಮಾತೆಯ ಅಡಿದಾವರೆಯಲ್ಲಿ ಬಲಿಗಾಗಿ ನೀವು ಜನ್ಮವೆತ್ತಿರುವಿರಿ ! ಮರೆಯದಿರಿ, ನಿಮ್ಮ ಸಾಮಾಜಿಕ ರಚನೆ ಅನಂತ ವಿಶ್ವವ್ಯಾಪಿ ಜಗಜ್ಜನನಿಯ ಕಾಂತಿಯನ್ನು ಪ್ರತಿಬಿಂಬಿಸುವುದಕ್ಕಾಗಿ ಇರುವುದು. ಮರೆಯದಿರಿ, ಅಂತ್ಯಜರು, ಮೂಢರು, ದರಿದ್ರರು, ನಿರಕ್ಷರಕುಕ್ಷಿಗಳು, ಚಂಡಾಲರು ಮತ್ತು ಚಮ್ಮಾರರೆಲ್ಲರೂ ನಿಮ್ಮ ರಕ್ತಬಂಧುಗಳಾದ ಸಹೋದರರು! ವೀರಾತ್ಮರೇ, ಧೀರರಾಗಿ, ನೆಚ್ಚುಗೆಡದಿರಿ. ಭಾರತೀಯರು ನಾವು ಎಂದು ಹೆಮ್ಮೆ ತಾಳಿ, ಸಾರಿ ಹೇಳಿ, ಭಾರತೀಯರು ನಾವು, ಭಾರತೀಯರೆಲ್ಲ ನಮ್ಮ ಸಹೋದರರು, ದರಿದ್ರ, ದೀನ, ಅನಾಥ ಭಾರತೀಯರೆಮ್ಮ ಸಹೋದರರು, ಬ್ರಾಹ್ಮಣ ಭಾರತೀಯರೆಮ್ಮ ಸಹೋದರರು, ಪಂಚಮ ಭಾರತೀಯರೆಮ್ಮ ಸಹೋದರರು. ನೀವು ಒಂದು ಚಿಂದಿ ಬಟ್ಟೆಯನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದರೂ, ಅಭಿಮಾನಪೂರ್ವಕವಾಗಿ, ದಿಕ್‌ತಟಗಳು ಅನುರಣಿತವಾಗುವಂತೆ ತಾರಸ್ವರದಿಂದ ಸಾರಿ ಹೇಳಿ: 'ಭಾರತೀಯರು ನಮ್ಮ ಸಹೋದರರು. ಭಾರತೀಯರು ನಮ್ಮ ಪ್ರಾಣ, ಭಾರತೀಯ ದೇವದೇವತೆಗಳೆಲ್ಲರೂ ನಮ್ಮ ದೇವರು, ಭಾರತೀಯ ಸಮಾಜ ನಮ್ಮ ಬಾಲ್ಯದ ತೊಟ್ಟಿಲು, ತಾರುಣ್ಯದ ನಂದನವನ, ವೃದ್ಧಾಪ್ಯದ ವಾರಾಣಸಿ. ಸೋದರನೇ, ಹೀಗೆ ಸಾರು: 'ಭಾರತ ಭೂಮಿಯೇ ನಮ್ಮ ಪರಂಧಾಮ. ಭಾರತೀಯ ಶುಭವೇ ನಮ್ಮ ಶುಭ.' ಹಗಲು ರಾತ್ರಿಯೂ ಇದು ನಿಮ್ಮ ಪ್ರಾರ್ಥನೆಯಾಗಲಿ: 'ಹೇ ಗೌರೀನಾಥ, ಹೇ ಜಗನ್ಮಾತೆ, ಪೌರುಷವನ್ನು ಎಮಗೆ ದಯಪಾಲಿಸು. ಹೇ ಸರ್ವಶಕ್ತಿಶಾಲಿನಿ, ನಮ್ಮ ದುರ್ಬಲತೆಯನ್ನು ದಹಿಸು, ಕ್ಲೈಬ್ಯವನ್ನು ಹೋಗಲಾಡಿಸು, ನಮ್ಮನ್ನು ಪೌರುಷವಂತರನ್ನಾಗಿ ಮಾಡು, ಪುರುಷಸಿಂಹರಾಗಿ ಮಾಡು.' "

ಭಾರತದ ಸ್ವಾತಂತ್ರ್ಯ ಹೋರಾಟ ಪೌರುಷಮಯವೂ, ಪರಾಕ್ರಮಯುತವೂ, ಆತ್ಮಾಂದೋಲನವೂ ಆಗುವಂತೆ ಮಾಡಿದ್ದು ಈ ಸಂದೇಶವೇ. ಇದು ಅಂದಿಗೂ ಇಂದಿಗೂ ಎಂದೆಂದಿಗೂ ಭಾರತ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳದ ಹಾಗೆ, ಉಳಿಸಿ ಬೆಳೆಸಿ ಅರ್ಥಪೂರ್ಣವಾಗಿಸಲು ಇರುವ ಸಂದೇಶ. ಈ ಪುರುಷಸಿಂಹ ಕೇವಲ ಉಪದೇಶ ಮಾತ್ರ ಮಾಡಲಿಲ್ಲ, ಭೋರ್ಗರೆವ ಕಡಲು ಈಜಿ ಕನ್ಯಾಕುಮಾರಿಯ ಪದತಲದಲ್ಲಿ ರಾಷ್ಟ್ರದ ಸಂಕಟಗಳ ಪರಿಹಾರಕ್ಕಾಗಿ ತಪಸ್ಸು ಮಾಡಿದರು; ಸ್ವದೇಶದಿಂದ ಹಲವು ಸಾಗರಗಳಾಚೆ ಇರುವ ದೇಶಕ್ಕೆ ಹೋಗಿ ತಮ್ಮ ಆತ್ಮಬಲದಿಂದ ಮತ್ತು ಆಧ್ಯಾತ್ಮಿಕ ವ್ಯಕ್ತಿತ್ವದ ಸಹಾಯದಿಂದ ಇಡೀ ವಿಶ್ವದ ಜನರನ್ನು ಗೆದ್ದು ಅವರ ಆತ್ಮಕಲ್ಯಾಣಕ್ಕೆ ಕಾರಣರಾಗಿ ವಿಶ್ವವಿಜೇತರಾದರು. ರಾಜಕೀಯವಾಗಿ ಗುಲಾಮತನದಲ್ಲಿದ್ದ ದೇಶದಿಂದ ಹೋಗಿ ೧೮೯೩ ರಷ್ಟು ಹಿಂದೆಯೇ ಶಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾರತಮಾತೆಯನ್ನು ಜಗನ್ಮಾತೆಯನ್ನಾಗಿಸಿದ ವೀರಸಂನ್ಯಾಸಿ, ಸ್ವಾತಂತ್ರ್ಯ ದ್ರಷ್ಟಾರ ಸ್ವಾಮಿ ವಿವೇಕಾನಂದ.

"ಈ ದೇಶದಲ್ಲಿ ಮೊದಲು ಭೂಮಿ ಹಸನಾಗಬೇಕು. ನಂತರ ಬೀಜ ಬಿತ್ತಿದರೆ ಗಿಡ ಸೊಂಪಾಗಿ ಬೆಳೆಯುವುದು" ಎಂಬ ಮನೋಧರ್ಮದಿಂದ ವಿವೇಕಾನಂದರು ಸ್ವಾತಂತ್ರ್ಯಹೋರಾಟದ ಬೀಜಬಿತ್ತನೆಗೆ ಬೇಕಾದ ಭೂಮಿಯನ್ನು ಹಸನು ಮಾಡಿದರು.

ಸುರೇಂದ್ರನಾಥ ಸೇನ್ ಅವರು ಒಮ್ಮೆ "ದೇಶದಲ್ಲಿ ಅನೇಕ ಪ್ರಬಲವಾದ ದೋಷಗಳಿವೆ. ಅದನ್ನು ತಿಳಿಯಲು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಇನ್ನೂ ಇತರ ಅನೇಕ ದೇಶಭಕ್ತ ಸಂಸ್ಥೆಗಳು ಬ್ರಿಟಿಷ್ ಸರಕಾರಕ್ಕೆ ಮನವಿಗಳನ್ನು ಕಳುಹಿಸಿ ಸತತವಾದ ಹೋರಾಟ ನಡೆಸುತ್ತಿವೆ. ಈ ಬೇಡಿಕೆಗಳನ್ನು ವ್ಯಕ್ತಗೊಳಿಸಲು ಯಾವುದು ಉತ್ತಮ ಹಾದಿ?" ಎಂದು ಪ್ರಶ್ನಿಸಿದಾಗ, ಸ್ವಾಮಿ ವಿವೇಕಾನಂದರು ಹೀಗೆ ಮರು ಪ್ರಶ್ನಿಸುತ್ತಾರೆ: "ಹೇಳಿ, ಅವು ಯಾರ ಬೇಡಿಕೆಗಳು? ನಿಮ್ಮವೋ ಅಥವಾ ನಿಮ್ಮ ಪ್ರಭುಗಳದ್ದೋ? ನಿಮ್ಮದಾಗಿದ್ದರೆ, ನಿಮ್ಮ ರಾಜರು ಅವನ್ನು ಒದಗಿಸುವರೋ ಅಥವಾ ನೀವೇ ಅದನ್ನು ನಿಮಗಾಗಿ ಮಾಡುವಿರೋ?"

ಅದಕ್ಕೆ ಸುರೇಂದ್ರನಾಥ ಸೇನರು, "ಆದರೆ ತನ್ನ ಪ್ರಜೆಗಳ ಇಷ್ಟಾರ್ಥವನ್ನು ನೆರವೇರಿಸುವುದು ರಾಜರ ಕರ್ತವ್ಯ. ರಾಜರಿಂದಲ್ಲದೆ ಮತ್ತಾರಿಂದ ನಾವು ಇದನ್ನು ನಿರೀಕ್ಷಿಸಬೇಕು?" ಎಂದು ಮತ್ತೆ ಕೇಳುತ್ತಾರೆ. ಅದಕ್ಕೆ ಸ್ವಾಮೀಜಿಯು, "ಭಿಕ್ಷುಕನ ಬೇಡಿಕೆಗಳೊಂದೂ ಈಡೇರುವುದಿಲ್ಲ" ಎಂಬ ದಿಟ್ಟ ಉತ್ತರವನ್ನು ನೀಡುತ್ತಾರೆ. ಸ್ವಾತಂತ್ರ್ಯ ಹೋರಾಟವೆಂಬುದು ಭಿಕ್ಷುಕನ ಬೇಡಿಕೆಗಳ ಮಂಡನೆಯಂತೆ ಆಗಬಾರದೆಂಬ ಆಶಯ ವಿವೇಕಾನಂದರದಾಗಿತ್ತು. ಅವರು ಮುಂದುವರೆದು, "ಸರ್ಕಾರ ನಿಮಗೆ ಬೇಕಾದುದನ್ನೆಲ್ಲ ಕೊಡುವುದೆಂದಿಟ್ಟುಕೊಳ್ಳೋಣ. ಆದರೆ ಜರೂರಾದ ಕೆಲಸಗಳನ್ನು ನೋಡಿಕೊಳ್ಳುವವರಾರು? ಆದ್ದರಿಂದ ಮನುಷ್ಯರನ್ನು ಮೊದಲು ನಿರ್ಮಾಣ ಮಾಡಿ. ನಮಗೀಗ ಬೇಕಾಗಿರುವುದು ಪೌರುಷವಂತರಾದ ಮನುಷ್ಯರು. ಶ್ರದ್ಧೆಯಿಲ್ಲದಿದ್ದಲ್ಲಿ ಅಂತಹ ಮನುಷ್ಯರನ್ನು ತಯಾರು ಮಾಡಲು ಹೇಗೆ ಸಾಧ್ಯ?" ಎನ್ನುತ್ತಾರೆ. ಮುಂದೆ ರಾಮಕೃಷ್ಣ ಮಿಷನ್ ಸಂಸ್ಥೆಯ ಮೂಲಕ ಸ್ವಾಮೀಜಿ ಶ್ರದ್ಧೆ ಹಾಗೂ ಶಕ್ತಿಯುತ ಪುರುಷಸಿಂಹರನ್ನು ದೇಶಾದ್ಯಂತ ನಿರ್ಮಿಸುತ್ತಾರೆ. ಆ ಮೂಲಕ ಭಾರತದ ಸ್ವಾತಂತ್ರ್ಯ ಚಳವಳಿ ಕೇವಲ ಭಿಕ್ಷುಕರ ಚಳವಳಿಯಾಗದೆ, ಸ್ವಾಭಿಮಾನಿ ಪುರುಷಸಿಂಹರ ಸ್ವತಂತ್ರ ಗರ್ಜನೆಯಾಗಿ ರೂಪುಗೊಳ್ಳುವಂತೆ ಮಾಡುತ್ತಾರೆ.

"ನಾವು ಮೊದಲು ಮಹಾತ್ಮರಾದ ಸಾಧುಗಳ ಆರಾಧನೆಯನ್ನು ಆರಂಭಿಸಬೇಕು. ಅವರು ಭರತಖಂಡದಲ್ಲಿ ಶಾಶ್ವತವಾಗಿರುವ ಸತ್ಯವನ್ನು ಪ್ರತ್ಯಕ್ಷ ಮಾಡಿಕೊಂಡರು. ಶ್ರೀರಾಮಚಂದ್ರ, ಶ್ರೀಕೃಷ್ಣ, ಮಹಾವೀರ, ಶ್ರೀರಾಮಕೃಷ್ಣ ಮುಂತಾದ ಪ್ರಖ್ಯಾತ ಮಹಾತ್ಮರೇ ನಮ್ಮ ಗುರಿಯಾಗಬೇಕೆಂದು ಜನರಿಗೆ ತಿಳಿಸಬೇಕು. ಶ್ರೀರಾಮಚಂದ್ರನಂತಹ ಮಹಾವೀರರ ಪೂಜೆಯನ್ನು ಈ ದೇಶದಲ್ಲಿ ಜಾರಿಗೆ ತರಬಲ್ಲೆಯಾ ? ಶ್ರೀಕೃಷ್ಣನ ಬೃಂದಾವನ ಲೀಲೆಯನ್ನು ಈಗ ಕಟ್ಟಿಡು. ಸಿಂಹವಾಣಿಯಲ್ಲಿ ಗೀತೆಯನ್ನು ಘೋಷಿಸಿದ ಆ ಕೃಷ್ಣನ ಪೂಜೆಯನ್ನು ಎಲ್ಲೆಡೆಯೂ ಹರಡು. ಪ್ರತಿದಿನ ಶಕ್ತಿಪೂಜೆಯನ್ನು, ಶಕ್ತಿಸ್ವರೂಪಿಣಿಯಾದ ಮಹಾಮಾತೆಯ ಪೂಜೆಯನ್ನು ಅನುಷ್ಠಾನಕ್ಕೆ ತನ್ನಿ... ಈಗಿನ ಸಂದರ್ಭದಲ್ಲಿ ನಿಮಗೆ ಆ ಪೂಜೆಯು (ಬೃಂದಾವನದ ಗೋಪಿಗಳೊಡನಿದ್ದ ಶ್ರೀಕೃಷ್ಣನ ದಿವ್ಯಲೀಲೆಯ ಪೂಜೆ) ಒಳ್ಳೆಯದಲ್ಲ. ಕೊಳಲೂದುವುದರಿಂದ ಈ ದೇಶವನ್ನು ಪುನರುಜ್ಜೀವನಗೊಳಿಸಲಾಗುವುದಿಲ್ಲ. ಯಾರ ನಾಡಿನಾಡಿಗಳಲ್ಲಿ ಅದ್ಭುತ ರಾಜಸ ಸ್ವಭಾವ ತುಂಬಿ ತುಳುಕಾಡುತ್ತಿದೆಯೊ, ಯಾರು ಸತ್ಯಸಾಕ್ಷಾತ್ಕಾರಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಲು